ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 405/2024

ಸಿ ಡಬ್ಲ್ಯೂ – 2

ಪಿ ಡಬ್ಲ್ಯೂ – 2

ದಿಃ 20-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಜೀವನ ತಾಂಡೇಲ್ |
| ತಂದೆಯ ಹೆಸರುಃ | ಥಾಕು |
| ವಯಸ್ಸುಃ | 35 ವರ್ಷ |
| ಉದ್ಯೋಗಃ | ಮೀನುಗಾರಿಕೆ |
| ವಿಳಾಸಃ | ಹಾರವಾಡ, ಅಂಕೋಲಾ. |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಚಾಸಾ-3 ರವರ ಪರಿಚಯವಿರುತ್ತದೆ. ದಿಃ24-04-2024 ರಂದು ನಾನು ಸಂತೆಗೆಂದು ಅಂಕೋಲಾ ಮಾರುಕಟ್ಟೆಗೆ ಬಂದಾಗ, ಚಾಸಾ-6 ರವರು ನಮ್ಮ ಊರಿನವರು ಅಪಘಾತದಿಂದ ಮರಣಪಟ್ಟಿದ್ದಿಂದ ಪಂಚನಾಮೆಗೆಂದು ಹಟ್ಟಿಕ್ಕೇರಿಯ ಬ್ರಿಡ್ಜ ಹತ್ತಿರ ಕರೆದುಕೊಂಡು ಹೋಗಿರುತ್ತಾರೆ. ನನ್ನ ಜೊತೆಗೆ ಚಾಸಾ-3,6 ಮತ್ತು ಪೊಲೀಸರು ಇದ್ದರು. ನಾವು ಹೋದಾಗ ವಾಹನಗಳು ಸ್ಥಳದಲ್ಲೇ ಇದ್ದು, ಅದೇ ಅಪಘಾತದ ಸ್ಥಳ ಎಂದು ಚಾಸಾ-6 ರವರು ತೋರಿಸಿರುತ್ತಾರೆ. ಬೈಕು ಸುಟ್ಟು ಹೋಗಿರುತ್ತದೆ. ಅಪಘಾತಪಡಿಸಿದ ತುಫಾನ್ ವಾಹನ ನಂ. ಕೆ ಎ 47 ಎಂ 4781 ಆಗಿರುತ್ತದೆ. ಪೊಲೀಸರು ಪೊಟೋಗಳನ್ನು ತೆಗೆದಿರುತ್ತಾರೆ. ನಕಾಶೆಯನ್ನೂ ಸಹ

ತಯಾರಿಸಿರುತ್ತಾರೆ. ಸಾಕ್ಷಿಯು ಪಂಚನಾಮೆ ಮತ್ತು ನಕಾಶೆಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-2, ನಕಾಶೆಯನ್ನು ನಿಪಿ-3, ಸಾಕ್ಷಿಯ ಸಹಿಗಳನ್ನು ನಿಪಿ-2ಎ ಮತ್ತು 3ಎ ಎಂದು ಗುರುತಿಸಲಾಯಿತು. ಸಾಕ್ಷಿಯು ತಾವು ಇರುವ 3 ಪೊಟೋಗಳನು ನೋಡಿ ಗುರುತಿಸಿದ್ದು,ಪೊಟೋಗಳನ್ನು ನಿಪಿ-4 ರಿಂದ 6 ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮಧ್ಯಾಹ್ನ 12 ರಿಂದ 2 ಗಂಟೆಯ ಒಳಗಡೆ ಮಾಡಿರುತ್ತಾರೆ. ನಂತರ ಅಲ್ಲಿಂದ ಪೊಲೀಸ್ ವಸತಿ ಗೃಹಕ್ಕೆ ಕರೆದುಕೊಂಡು ಬಂದಿರುತ್ತಾರೆ. ಅಲ್ಲಿ ವಾಹನಗಳು ಇದ್ದು,ಅಲ್ಲೂ ಸಹ ಪೊಟೋವನ್ನು ತೆಗೆದಿರುತ್ತಾರೆ. ಸಾಕ್ಷಿಯು ವಾಹನ ಪಂಚನಾಮೆಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ವಾಹನ ಪಂಚನಾಮೆಯನ್ನು ನಿಪಿ-7, ಸಾಕ್ಷಿಯ ಸಹಿಯನ್ನು ನಿಪಿ-7ಎ ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮಧ್ಯಾಹ್ನ 2.30 ರಿಂದ 3-3.30 ಗಂಟೆಯ ಒಳಗಡೆ ಜರುಗಿಸಿರುತ್ತಾರೆ. ಸಾಕ್ಷಿಯು ವಾಹನಗಳು ಇರುವ 7 ಪೊಟೋಗಳನ್ನು ಗುರುತಿಸಿದ್ದು, ಪುರಾವೆಗೆ ಒಳಪಟ್ಟು ನಿಪಿ-8 ರಿಂದ 14 ಎಂದು ಗುರುತಿಸಲಾಯಿತು.

2. ದಿಃ01-05-2024 ರಂದು ಠಾಣೆಯ ಹತ್ತಿರ ಕರೆದಿದ್ದು, ಅಲ್ಲಿಂದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಬಾಟಲಿನಲ್ಲಿ ಏನೋ ಇರುವುದನ್ನು ತೋರಿಸಿರುತ್ತಾರೆ, ಅದು ಏನು ಎಂದು ನನಗೆ ಸ್ಪಷ್ಟವಾಗಿ ಹೇಳಲು ಬರುವುದಿಲ್ಲ. ಸಾಕ್ಷಿಯು ಜಪ್ತಿಪಂಚನಾಮೆಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಜಪ್ತಿಪಂಚನಾಮೆಯನ್ನು ನಿಪಿ-15, ಸಾಕ್ಷಿಯ ಸಹಿಯನ್ನು ನಿಪಿ-15ಎ ಎಂದು

ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಎಷ್ಟು ಗಂಟೆಗಯಿಂದ ಎಷ್ಟು ಗಂಟೆಯವರೆಗೆ ಮಾಡಿರುತ್ತಾರೆ ಎಂದು ನೆನಪಿಗೆ ಬರುತ್ತಿಲ್ಲ. ಮತ್ತೆ ಏನನ್ನೂ ಮಾಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

ಪಾಟಿ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದ

2. ಪಂಚನಾಮೆಗೆ ಪೊಲೀಸರು ನಿಮ್ಮನ್ನು ಕರೆದಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಪೊಲೀಸರ ವಾಹನದಲ್ಲೇ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಆಸ್ಪತ್ರೆಯಲ್ಲಿ ಮೃತ ಸುಮಂತನ ಅಂಗಾಂಗಗಳನ್ನು ತಜ್ಞರ ಪರೀಕ್ಷೆಗೆ ಕಳುಹಿಸಿಕೊಡಲು ನಿಮಗೆ ತೋರಿಸಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆಯನ್ನು ಸಂಜೆ 5.10 ರಿಂದ 6.10 ಗಂಟೆಯವರೆಗೆ ಮಾಡಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಐ.ಕೆ.ಹೆಚ್ ಇವರಿಂದಃ

3. ಪೊಲೀಸರು ನಿಮಗೆ ಪಂಚನಾಮೆಗೆ ಹೋಗುವ ಪೂರ್ವದಲ್ಲಿ ನೋಟೀಸನು ಏನಾದರೂ ಕೊಟ್ಟಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ಯಾರು ಬರೆದರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನೀವು ಬಿಳಿ ಹಾಳೆಯ ಮೇಲೆ ಸಹಿ ಮಾಡಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಅದರಲ್ಲಿ

ಬರೆದಿರುವುದನ್ನು ಓದಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನಿಮಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಬರೆದ ವಿಷಯವನ್ನು ಯಾರು ಓದಿ ಹೇಳಿರುತ್ತಾರೆ ಎಂದರೆ ಸಾಕ್ಷಿಯು ಪೊಲೀಸರು ಓದಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತ ಸ್ಥಳವನ್ನು ನೀವು ಕಣ್ಣಾರೇ ನೋಡಿರುತ್ತೀರಾ ಎಂದರೆ ಪಂಚನಾಮೆಗೆ ಹೋದಾಗ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಐ ಆರ್ ಬಿ ಕಾಮಕಾರಿಕೆ ನಡೆಯುತ್ತಿದ್ದರಿಂದ ಸದರಿ ರಸ್ತೆಯಿಂದ ಒಂದು ಬದಿಯಲ್ಲಿ ಬಂದ್ ಮಾಡಿ ಒಂದೇ ಕಡೆ ವಾಹನವನ್ನು ಚಲಾಯಿಸಲು ಬಿಟ್ಟಿದ್ದರು ಎಂದರೆ ಸರಿ. ದಕ್ಷಿಣದಿಂದ ಉತ್ತರದ ಕಡೆಗೆ ಇಳಿಜಾರು ಇರುತ್ತದೆ ಎಂದರೆ ಸಾಕ್ಷಿಯು ಬ್ರಿಡ್ಜ ಇರುವುದರಿಂದ ಅಷ್ಟೊಂದು ಇಳಿಜಾರು ಇರುವುದಿಲ್ಲ ಎಂದು ನುಡಿಯುತ್ತಾರೆ. ಬ್ರಿಡ್ಜ ನಿಂದ ಸ್ವಲ್ಪ ತಿರುವಿನಲ್ಲಿ ದಕ್ಷಿಣ ಕಡೆಗೆ ಟೋಲ್ ಪ್ಲಾಜಾ ತನಕ ಏರಿನಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಹಾತ್ ನಕಾಶೆಯನ್ನು ಯಾರು ಬಿಡಿಸಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಹಾತ್ ನಕಾಶೆಯಲ್ಲಿ ಅಪಘಾತ ಸ್ಥಳ ಎಂದು ತೋರಿಸಿದ ಜಾಗದಲ್ಲಿ ಯಾವುದೇ ಅಪಘಾತ ನಡೆದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಏರಿಕೆ ಇದ್ದಾಗ ವಾಹನವು ನಿಧಾನವಾಗಿ ಚಲಾಯಿಸುತ್ತದೆ ಎಂದರೆ ಸರಿ. ಅದೇರೀತಿ ದಕ್ಷಿಣದಿಂದ ಉತ್ತರದ ಕಡೆಗೆ ಇಳಿಜಾರು ಇರುವುದರಿಂದ ವಾಹನವು ವೇಗವಾಗಿ ಹೋಗುತ್ತವೆ ಎಂದರೆ ಸರಿ. ಮೃತ ಸುಮಂತ ಸಾರಾಯಿ ಕುಡಿದು ಅತೀ ವೇಗದಲ್ಲಿ ತ್ರಿಬಲ್ ರೈಡಿಂಗ್ ಮಾಡುತ್ತಿದ್ದ ಬಗ್ಗೆ ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಆತನು ಸಾರಾಯಿ ಕುಡಿಯುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಅಂಕೋಲಾ

ತಾಲೂಕಾ ವೈದ್ಯರು ದಿಃ12-07-2024 ರಂದು ಮರಣೋತ್ತರ ವರದಿಯಲ್ಲಿ ಮರಣ ಪಡುವ ಪೂರ್ವದಲ್ಲಿ ಸಾರಾಯಿ ಕುಡಿದಿದ್ದ ಎಂದು ವರದಿ ಕೊಟ್ಟಿರುವ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಪಿ-4 ರಿಂದ 6 ಪೂಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಪಂಚನಾಮೆಯ ಕಾಲದಲ್ಲಿ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿ ಡಿವೈಡರ್ ಪಕ್ಕದಲ್ಲಿರುವ ರಸ್ತೆಯು ಕಾರವಾರ ಕಡೆಗೆ ಹೋಗುತ್ತಿದ್ದು, ನಂತರದಲ್ಲಿರುವ ರಸ್ತೆಯ ಅಂಕೋಲಾ ಕಡೆಗೆ ಬರುತ್ತದೆ ಎಂದರೆ ಸರಿ. ಸದರಿ ಪೊಟೋದಲ್ಲಿ ಅಂಕೋಲಾ ಕಡೆಗೆ ಹೋಗುವ ರಸ್ತೆಯು ಏರಿಕೆಯಲ್ಲಿದ್ದು, ಕಾರವಾರ ಕಡೆಗೆ ಹೋಗುವ ರಸ್ತೆಯು ಇಳಿಜಾರಿನಲ್ಲಿ ಇರುವುದು ಕಂಡುಬರುತ್ತದೆ ಎಂದರೆ ಸರಿ. ಪೊಟೋದಲ್ಲಿ ನೀವು ನಿಂತಿರುವ ಜಾಗದಲ್ಲಿ ಅಪಘಾತವಾಗಿರುವುದಿಲ್ಲ, ಬದಲಾಗಿ ಅಂಕೋಲಾ ಕಡೆಗೆ ಹೋಗುವ ರಸ್ತೆಯಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ನೀವು ನಿಂತಿರುವ ಜಾಗವು ಅಪಘಾತ ಸ್ಥಳದ ಜಾಗವಲ್ಲ, ಸುಳ್ಳು ಪಂಚನಾಮೆಗೆ ಪೊಟೋ ತೆಗೆಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಮೃತ ಸುಮಂತ ಇವರು ಸಾರಾಯಿ ಕುಡಿದ ನಶೆಯಲ್ಲಿ ವೇಗವಾಗಿ ಬಂದು ಆತನೇ ಆರೋಪಿಯ ವಾಹನಕ್ಕೆ ಡಿಕ್ಕಿಪಡಿಸಿರುತ್ತಾನೆ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಮೃತ ಸುಮಂತ ಈತನು ವೇಗವಾಗಿ ಬಂದು ತುಫಾನ್ ವಾಹನಕ್ಕೆ ಡಿಕ್ಕಿ ಹೊಡೆದಿದ್ದರಿಂದ ಸುಮಂತನ ವಾಹನದ ಪೆಟ್ರೋಲ್ ಟ್ಯಾಂಕಿನ ಕ್ಯಾಪ್ ಪ್ರೆಸ್ ಆಗಿ ಪೆಟ್ರೋಲ್ ಹೊರಗಡೆ ಚಿಮ್ಮಿ ಹೆಡ್ ಲೈಟಿಗೆ ಬಿದ್ದು, ಹೆಡ್ ಲೈಟಿನಿಂದ ಸ್ಪಾರ್ಕ ಬಂದದ್ದರಿಂದ ಬೈಕಿಗೆ ಬೆಂಕಿ ಹತ್ತಿ ಆತನೂ ಸಹ

ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಪಂಚನಾಮೆಯ ಕಾಲದಲ್ಲಿ ಬೈಕಿನ ಪೆಟ್ರೋಲ್ ಟ್ಯಾಂಕಿನ ಕ್ಯಾಪ್ ಮುಚ್ಚಿಯೇ ಇತ್ತು ಎಂದು ನುಡಿಯುತ್ತಾರೆ. ನೀವು ಯಾವುದೇ ಕಾಲದಲ್ಲೂ ಪಂಚನಾಮೆಗೆ ಹೋಗಿದ್ದೇ ಇರುವುದಿಲ್ಲ, ಬಿಳಿ ಹಾಳೆಯ ಮೇಲೆ ಪೊಲೀಸ್ ಠಾಣೆಯಲ್ಲೇ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ-4 ರಿಂದ 6 ಪೊಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂಬ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾಹನಗಳನ್ನು ಎಲ್ಲಿ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಪೊಲೀಸ್ ವಸತಿ ಗೃಹದಲ್ಲಿ ಎಂದು ನುಡಿಯುತ್ತಾರೆ. ಪಂಚನಾಮೆಯ ಕಾಲದಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿಯು ನಾನು, ಚಾಸಾ-3,6 ಮತ್ತು ಊರಿನ ಜನರು ಇದ್ದರು ಎಂದು ನುಡಿಯುತ್ತಾರೆ. ಮೂರು ಪಂಚನಾಮೆಗಳಿಗೆ ನಿಮ್ಮನ್ನೇ ಆಯ್ಕೆ ಮಾಡಲು ಯಾವ ಕಾರಣ ಇರುತ್ತದೆ ಎಂರದೆ ಸಾಕ್ಷಿಯು ಮೃತನು ನಮ್ಮ ಊರಿನವರು ಆಗಿದ್ದರಿಂದ ಯಾರೂ ಸಹ ಮುಂದೆ ಬರದ ಕಾರಣ ನನ್ನನ್ನೇ ಆಯ್ಕೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ತುಫಾನ್ ವಾಹನದ ಬಲಬದಿಯ ಚಕ್ರದ ಹತ್ತಿರ ಹಾನಿಯಾಗಿರುತ್ತದೆ ಎಂದರೆ ಸರಿ. ನಿಪಿ-11 ರಲ್ಲಿ ತುಫಾನ್ ವಾಹನದ ಬಲಬದಿಯ ಚಕ್ರದ ಹಿಂಬದಿಯಲ್ಲಿ ಬೆಂಡ್ ಆಗಿರುತ್ತದೆ ಎಂದರೆ ಸರಿ. ಮೃತ ಸುಮಂತ ಈತನು ವೇಗವಾಗಿ ತನ್ನ ಬೈಕನ್ನು ಚಲಾಯಿಸಿಕೊಂಡು ಬಂದಿದು ಡಿಕ್ಕಿ ಹೊಡೆದಿದ್ದರಿಂದ ಈ ರೀತಿ ಬೆಂಡಾಗಿರುತ್ತದೆ ಎಂದರೆ ಸರಿಯಲ್ಲ. ನಿಮ್ಮ ಪ್ರಕಾರ ಮೃತ ಸುಮಂತ ಇವರಿಗೆ ತುಫಾನ್ ವಾಹನದ ಯಾವ ಭಾಗ ತಾಗಿರುತ್ತದೆ ಎಂದರೆ ಸಾಕ್ಷಿಯು ಬಲಭಾಗ ತಾಗಿರುತ್ತದೆ ಎಂದು ನುಡಿಯುತ್ತಾರೆ. ಒಂದು

ವೇಳೆ ತುಫಾನ ವಾಹನದ ಅತೀ ವೇಗದಿಂದ ಅಪಘಾತವಾಗಿದ್ದರೆ ಸುಮಂತ ಜೊತೆಗೆ ಚಾಸಾ–9 ಮತ್ತು 10 ರವರೂ ಸಹ ಮರಣಪಡುತ್ತಿದ್ದರು ಎಂದರೆ ಸರಿಯಲ್ಲ. ನೀವು ಹಾಗೂ ಪೊಲೀಸರು ಶ್ಯಾಮೀಲಾಗಿ ಬೈಕಿನ ಮೇಲೆ ಪೆಟ್ರೋಲ್ ಟ್ಯಾಂಕಿನ ಕ್ಯಾಪನ್ನು ಮುಚ್ಚಿಟ್ಟು ಸುಳ್ಳು ಪೊಟೋಗಳನ್ನು ತೆಗೆದಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದರಲ್ಲಿ ಪೆಟ್ರೋಲ್ ಇತ್ತು ಎಂದು ನುಡಿಯುತ್ತಾರೆ. ನೀವು ಪೋಟೋ ತೆಗೆದ ಸಂದರ್ಭದಲ್ಲಿ ಪೆಟ್ರೋಲ್ ಏನಾದರೂ ಮಾದರಿಗಾಗಿ ತೆಗೆದು ಪೊಲೀಸರಿಗೆ ಕೊಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅದರಲ್ಲ ಯಾವುದೇ ಪೆಟ್ರೋಲ್ ಇದ್ದಿದ್ದು ಇರುವುದಿಲ್ಲ, ಪೊಲೀಸರ ಹೇಳಿಕೆ ಮೇರೆಗೆ ಸುಳ್ಳು ಸಹಿ ಹಾಕಿ ಪೊಟೋಗಳನ್ನು ತೆಗೆಸಿಕೊಂಡು ಬಂದಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಸಮಕ್ಷಮ ಯಾವುದೇ ಜಪ್ತಿ ಪಂಚನಾಮೆ ಆಗಿರುವುದೇ ಇಲ್ಲ, ನೀವು ಬಿಳಿ ಹಾಳೆಯಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಅಂಗಾಗ ಜಪ್ತಿ ಪಂಚನಾಮೆಯನ್ನು ಎಲ್ಲಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಆಸ್ಪತ್ರೆಯಲ್ಲಿ ಎಂದು ನುಡಿಯುತ್ತಾರೆ. ನಿಮ್ಮ ಸಮಕ್ಷಮ ಏನೇನು ತೆಗೆದಿರುತ್ತಾರೆ ಎಂದು ಹೇಳಲು ಬರುತ್ತಾ ಎಂದರೆ ಸಾಕ್ಷಿಯು ಹೇಳಲು ಬರುವುದಿಲ್ಲ, ಬಾಟಲಿಯಲ್ಲಿ ಸುಮಾರು ತೋರಿಸಿದ್ದರು ಎಂದು ನುಡಿಯುತ್ತಾರೆ. ನಿಮ್ಮ ಸಮಕ್ಷಮ ಬಾಟಲಿಯನ್ನು ತೂಕ ಮಾಡಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸರಕಾರಿ ಆಸ್ಪತ್ರೆಯಲ್ಲಿ ನಿಮ್ಮ ಸಮಕ್ಷಮ ಮಾನವ ಅಂಗಾಂಗಗಳ ಜಪ್ತಿ ಪಂಚನಾಮೆ ಆಗಿರುವುದಿಲ್ಲ, ಸುಳ್ಳು ಹೇಳುತಿದ್ದೀರಿ ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೂ ಸಹ ನೀವು ಪೊಲೀಸ್ ಠಾಣೆಯಲ್ಲಿಯೇ ಬಿಳಿ

ಹಾಳೆಯ ಮೇಲೆ ಸಹಿ ಮಾಡಿದ್ದು, ಪೊಲೀಸರೇ ನಂತರ ಅದರಲ್ಲಿ ಬರೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮೃತ ಸುಮಂತ ಸಾರಾಯಿಯನ್ನು ಕುಡಿಯುತ್ತಿದ್ದ ಕಾರಣ ಪರಿಹಾರ ಬರುವುದಿಲ್ಲ ಎಂಬ ಕಾರಣಕ್ಕಾಗಿ ನೀವು ಚಾಸಾ-1 ಮತ್ತು ಪೊಲಿಸರ ಜೊತೆಗೆ ಶ್ಯಾಮೀಲಾಗಿ ಸುಳ್ಳು ಪಂಚನಾಮೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಹಾತ್ ನಕಾಶೆಯಲ್ಲಿ ಪೊಲೀಸರು ತೋರಿಸಿದ ಜಾಗದಲ್ಲಿ ಯಾವುದೇ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಅದರ ಬದಲಾಗಿ ಮೃತ ಸುಮಂತ ಈತನು ನಿಪಿ-3 ಕಚ್ಚಾ ನಕಾಶೆಯಲ್ಲಿ 23 ಅಡಿ ಎಂದು ಬರೆದಿರುವ ಜಾಗದಲ್ಲಿ ವೇಗವಾಗಿ ಬಂದು ಅಪಘಾತಪಡಿಸಿದ್ದರೂ ಸಹ ನೀವು ಪೊಲೀಸರ ಜೊತೆಗೆ ಶ್ಯಾಮೀಲಾಗಿ ಅಪಘಾತ ಸ್ಥಳವನ್ನೇ ತಪ್ಪಾಗಿ ತೋರಿಸಿ, ಸುಳ್ಳು ಪಂಚನಾಮೆಗಳನ್ನು ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ವಿಷಯಗಳು ಸುಳ್ಳು ಇದ್ದರೂ ಸಹ ಮೃತ ಸುಮಂತ ಇವರಿಗೆ ಸಹಾಯವಾಗುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು, ಮೃತ ಸುಮಂತ ಮತ್ತು ಚಾಸಾ-1 ರವರ ಊರಿನವರು ಆಗಿದ್ದರಿಂದ ಅವರಿಗೆ ಅನುಕೂಲವಾಗಲೆಂದು ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.